# ಬೆಂಗಳೂರು ____ ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು –560056

ಸಂಖ್ಯೆ: ಎಸಿಎ.4/ಸ್ನಾ.ಪ./2019–20 ದಿನಾಂಕ: 03.09.2019

## ಸ್ನಾತಕೋತ್ತರ ಪದವಿ ಪ್ರವೇಶಾತಿ ಅಧಿಸೂಚನೆ

ಬೆಂಗಳೂರು ವಿಶ್ವವಿದ್ಯಾಲಯವು 2019–20ನೇ ಶೈಕ್ಷಣಿಕ ವರ್ಷಕ್ಕೆ ಜ್ಞಾನಭಾರತಿ ಆವರಣ ಖಾಲಿ ಇರುವ ಸ್ಥಾನಗಳಿಗೆ ಈ ಕೆಳಗಿನ ಪಿ.ಜಿ ಕೋರ್ಸುಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

1) **ಕಲಾ ನಿಕಾಯ**

**ಸ್ವಂತ ಹಣದ ಕೋರ್ಸು:** ಎಂ.ಎ.– ಅಪರಾಧಶಾಸ್ತ್ರ, ಮಾಧ್ಯಮ ಅಧ್ಯಯನ, ಸಾರ್ವಜನಿಕ ಸಂಪರ್ಕ ಮತ್ತು ಜಾಹೀರಾತು.

2) **ವಿಜ್ಞಾನ ನಿಕಾಯ:**

**ಸ್ವಂತ ಹಣದ ಕೋರ್ಸು:** ಎಂ.ಎಸ್ಸಿ.–ಫಿಲ್ಮ್ ಮೇಕಿಂಗ್, ವಿಧಿ ವಿಜ್ಞಾನ, ಗ್ರಾಫಿಕ್ಸ್ ಮತ್ತು ಅನಿಮೇಷನ್, ನೈಸರ್ಗಿಕ ವಿಪತ್ತು ನಿರ್ವಹಣೆ, ಘನತ್ಯಾಜ್ಯ ನಿರ್ವಹಣೆ, ಮತ್ತು ಭೌಗೋಳಿಕ ಮಾಹಿತಿ ವಿಜ್ಞಾನ.

3) **ಪಿ.ಜಿ ಡಿಪ್ಲೋಮ ಕೋರ್ಸು:** ಕ್ಲೀನಿಕಲ್ ಎಂಬ್ರಾಯೋಲಾಜಿ ಮತ್ತು ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ,

**ಅರ್ಜಿಯನ್ನು ಸಲ್ಲಿಸಲು ಮಾರ್ಗಸೂಚಿಗಳು:**

- ಪ್ರತಿಯೊಂದು ಸ್ನಾತಕೋತ್ತರ ಕೋರ್ಸಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು.
- ಅರ್ಜಿ ನಮೂನೆ ಮತ್ತು ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಅಂತರಜಾಲ **www.bangaloreuniversity.ac.in** ನಲ್ಲಿ ನೋಡಬಹುದು.
- **ಅರ್ಜಿ ಶುಲ್ಕ:** ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪ್ರತಿ ಕೋರ್ಸಿಗೂ ರೂ.200/– ಮತ್ತು ಪರಿಶಿಷ್ಟ ಜಾತಿ/ಪಂಗಡ ಪ್ರವರ್ಗ–1/ ಹಾಗೂ ವಿಶೇಷ ಚೇತನಾರು (PWD) ಅಭ್ಯರ್ಥಿಗಳು ಪ್ರತಿ ಕೋರ್ಸಿಗೂ ರೂ.100/–ಗಳನ್ನು ಆನ್‌ಲೈನ್ ಮುಖಾಂತರ ಸಂದಾಯ ಮಾಡಬೇಕು ಮೂಲ ಶುಲ್ಕದ ರಸೀಧಿಯನ್ನು ಭರ್ತಿ ಮಾಡಿದ ಅರ್ಜಿಯ ಜೊತೆ ಲಗತ್ತಿಸಬೇಕು.
- ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಭರ್ತಿ ಮಾಡಲು ದಿನಾಂಕ **03.09.2019** ರಿಂದ ಆನ್‌ಲೈನ್ ಪೋರ್ಟಲ್ ತೆರೆದಿರುತ್ತದೆ.
- ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು (ಸೂಕ್ತ ದಾಖಲಾತಿಗಳು ಹಾಗೂ ಪ್ರಮಾಣ ಪತ್ರಗಳನ್ನು ಲಗತ್ತಿಸದ ಅರ್ಜಿಗಳನ್ನು).
- ಆನ್‌ಲೈನ್ ಮುಖಾಂತರ ಭರ್ತಿ ಮಾಡಿದ ಅರ್ಜಿಗಳ ಜೊತೆ ಸೀಟುಗಳ ಕೋರಿಕೆಗೆ ಬೇಕಾಗಿರುವ ಪೂರಕ ದಾಖಲೆಗಳನ್ನು ಲಗತ್ತಿಸಿರಬೇಕು ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಆಯಾ ವಿಭಾಗದ ಮುಖ್ಯಸ್ಥರ ವಿಳಾಸಕ್ಕೆ ಅರ್ಜಿಗಳನ್ನು ಕಳುಹಿಸುವುದು.
- ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸ ಬೇಕಾಗಿರುವ ವಿಭಾಗಗಳ ವಿಳಾಸವನ್ನು ಬೆಂಗಳೂರು ವಿಶ್ವವಿದ್ಯಾಲಯದ ವೆಬ್‌ಸೈಟ್‌ಯಿಂದ ಪಡೆಯಬಹುದು.
- ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿ ಪಡಿಸಿದ ಕೊನೆಯ **11.09.2019** ದಿನಾಂಕದ ನಂತರ ಸಲ್ಲಿಸುವ ಅಥವಾ ತಲುಪುವ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ಸಾರಸಗಟಾಗಿ ತಿರಸ್ಕರಿಸಲಾಗುವುದು.
- ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಆಯಾಯ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸಬಹುದು.
- ಅಭ್ಯರ್ಥಿಗಳು ಅರ್ಜಿಗಳನ್ನು ತುಂಬುವ ಮೊದಲು, ಅರ್ಹತಾ ನಿಯಮ ನಿಬಂಧನೆಗಳು ಶುಲ್ಕಪಾವತಿಯ ಸ್ವರೂಪ ಮೊದಲಾದ ನಿರ್ದೇಶನಗಳಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಜಾಲ **www.bangaloreuniversitv.ac.in** ಗೆ ಭೇಟಿ ನೀಡಲು ಸೂಚಿಸಲಾಗಿದೆ. ಅರ್ಜಿ ನಮೂನೆ ಅಂತರ ಜಾಲದಲ್ಲಿ ಲಭ್ಯವಿದೆ.
- ಅರ್ಜಿಯನ್ನು ತುಂಬುವ ಮೊದಲು ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಜಾಲಕ್ಕೆ ಅಧಿಕೃತ e-mail ಗುರುತಿನೊಂದಿಗೆ ಲಾಗ್‌ಇನ್ ಆಗಬೇಕಾಗಿರುತ್ತದೆ. ಆದ್ದರಿಂದ ಅರ್ಜಿ ತುಂಬುವ ಮೊದಲು ಅಭ್ಯರ್ಥಿಗಳೆಲ್ಲರು ವೈಯಕ್ತಿಕ ಇ–ಮೇಲೆಅನ್ನು ಸೃಷ್ಟಿಸಿಕೊಂಡು ಅರ್ಜಿ ತುಂಬುವ ಪ್ರಕ್ರಿಯೆಯನ್ನು ಆರಂಭಿಸಲು ಸೂಚಿಸಲಾಗಿದೆ.

| ಅರ್ಜಿಗಳನ್ನು ವಿತರಿಸುವ, ಅರ್ಜಿಗಳನ್ನು ಸಲ್ಲಿಸುವ ಹಾಗೂ ಪ್ರವೇಶ ಪ್ರಕ್ರಿಯೆಯ ದಿನಾಂಕಗಳು: | |
|---|---|
| ಅ) ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ದಿನಾಂಕ | 03.09.2019 |
| ಆ) ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 11.09.2019 |
| ಇ) ಪಿ.ಜಿ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯ ದಿನಾಂಕ | 13.09.2019 |

(ಸಹಿ)

ಕುಲಸಚಿವರು 3/9/2019.

ಗೆ,

1. ಡೀನ್ ಕಲಾ/ವಾಣಿಜ್ಯ/ವಿಜ್ಞಾನ/ಶಿಕ್ಷಣ/ಕಾನೂನು ನಿಕಾಯಗಳು, ಬೆಂಗಳೂರು ವಿಶ್ವವಿದ್ಯಾಲಯ.ಬೆಂಗಳೂರು.
2. ಎಲ್ಲಾ ವಿಭಾಗದ ಅಧ್ಯಕ್ಷರುಗಳು/ಸಂಯೋಜನಾಧಿಕಾರಿಗಳು, ಜ್ಞಾನಭಾರತಿ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ರಾಮನಗರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.